## ಜಾಗತಿಕ ಮಟ್ಟದಲ್ಲಿ ತೆರವಾದ ಅಣೆಕಟ್ಟುಗಳು

ಕ್ಯಾಲಿಫೋರ್ನಿಯಾದ ಕ್ಲಾಮತ್ ನದಿಗೆ 1903ರಿಂದ 1962ರವರೆಗೂ ಅನೇಕ ಅಣೆಕಟ್ಟುಗಳನ್ನು ಕಟ್ಟಲಾಯಿತು. ಇದರಿಂದಾಗಿ ನದಿಯ ಅಪರೂಪದ ಸಾಲ್ಮನ್ ವಲಸೆ ಮೀನಿನ ಸಂತತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತಲ್ಲದೇ, ವಿಪರೀತ ಪ್ರಮಾಣದಲ್ಲಿ ಹೂಳು ಶೇಖರಣೆಯಾಯಿತು. ಜೀವನಕ್ಕಾಗಿ ನದಿಯ ಹರಿವನ್ನು ಮತ್ತು ವಲಸೆ ಮೀನುಗಳನ್ನೇ ನಂಬಿಕೊಂಡಿದ್ದ ಆದಿವಾಸಿಗಳ ಜೀವನ ದುಸ್ತರವಾಯಿತು.

ಕಡಿಮೆಯಾದ ನೀರಿನ ಪ್ರಮಾಣ ಹಾಗೂ ಹೆಚ್ಚಾದ ಉಷ್ಣಾಂಶದ ಕಾರಣಕ್ಕೆ 2002ರಲ್ಲಿ ಕ್ಲಾಮತ್ ನದಿಯ ಮೀನುಗಳಿಗೆ ಸಾಂಕ್ರಾಮಿಕ ರೋಗ ಹರಡಿ, 34000 ಮೀನುಗಳು ಸತ್ತುಹೋದವು. ಈ ಘಟನೆಯಿಂದಾಗಿ ಅಲ್ಲಿನ ಯುರೋಕ್ ಆದಿವಾಸಿಗಳು ಕಂಗಲಾದರು ಹಾಗೂ ಕ್ಲಾಮತ್ ನದಿಗೆ ಅಡ್ಡಲಾಗಿ ಕಟ್ಟಿದ ಅಣೆಕಟ್ಟುಗಳನ್ನು ತೆರವುಗೊಳಿಸಬೇಕು ಎಂಬ ಕೂಗು ಪ್ರಾರಂಭವಾಯಿತು. ಆದಿವಾಸಿಗಳ ಕೂಗಿಗೆ ಅಲ್ಲಿನ ಪರಿಸರವಾದಿಗಳು ಕೈಜೋಡಿಸಿದರು. ಸುದೀರ್ಘ 20 ವರ್ಷಗಳ ಪ್ರಯತ್ನದ ಫಲವಾಗಿ ಅಲ್ಲಿನ ಸರ್ಕಾರ ಅಣೆಕಟ್ಟು ತೆರವುಗೊಳಿಸಲು 2023ರಲ್ಲಿ ಅನುಮತಿ ನೀಡಿತು. 2023ರ ಜುಲೈ ತಿಂಗಳಲ್ಲಿ ಪ್ರಾರಂಭವಾದ ಕ್ಲಾಮತ್ ಅಣೆಕಟ್ಟು ತೆರವು ಕಾರ್ಯಾಚರಣೆ 2024ರ ಅಕ್ಟೋಬರ್ 2ರಂದು ಪೂರ್ಣಗೊಂಡಿತು. ಈಗ ಸಾಲ್ಮನ್ ಮೀನುಗಳು ಸರಾಗವಾಗಿ ವಲಸೆ ಹೋಗಲು ಪ್ರಾರಂಭಿಸಿದ್ದನ್ನು ದಾಖಲಿಸಲಾಗಿದೆ. ಜೊತೆಗೆ ನದಿಯ ಹರಿವನ್ನು ನಂಬಿಕೊಂಡಿದ್ದ ಅಲ್ಲಿನ ಆದಿವಾಸಿಗಳ ಬದುಕು ಹಸನಾಗಲಿದೆ ಎಂದು ಆದಿವಾಸಿಗಳ ಮುಖಂಡ ಜೋಸೆಫ್ ಎಲ್‌ ಜೋನ್ಸ್ ಅಭಿಪ್ರಾಯ ಪಟ್ಟಿದ್ದಾರೆ.

ಫ್ರಾನ್ಸ್ ದೇಶದ ಸೆಲೂನೆ ನದಿಗೆ ಅಡ್ಡಲಾಗಿ 1932ರಲ್ಲಿ ಕಟ್ಟಿದ್ದ 36 ಮೀಟರ್ ಎತ್ತರದ ಅಣೆಕಟ್ಟನ್ನು ತೆರವುಗೊಳಿಸಲಾಗಿದೆ. ಸ್ಪೇನ್ ದೇಶದ ಅಗುಡಾ ನದಿಗೆ ಅಡ್ಡಲಾಗಿ ಕಟ್ಟಿದ್ದ ಅರ್ಸೆ ಅಣೆಕಟ್ಟನ್ನು 2017ರಲ್ಲಿ ತೆರವುಗೊಳಿಸಲಾಯಿತು. ಜಪಾನಿನ ಕುಮ ನದಿಗೆ ಅಡ್ಡಲಾಗಿ 1955ರಲ್ಲಿ ಕಟ್ಟಿದ ಅಣೆಕಟ್ಟನ್ನು 2012ರಲ್ಲಿ ತೆರವುಗೊಳಿಸಲಾಯಿತು.

ಏಷ್ಯಾ ಖಂಡದಲ್ಲಿ ಮೊದಲ ಬಾರಿಗೆ ಅಣೆಕಟ್ಟನ್ನು ತೆರವುಗೊಳಿಸಿದ ಹೆಗ್ಗಳಿಕೆ ಜಪಾನಿಗೆ ಸಂದಿತು. ಹೀಗೆ ಚಿಲಿ, ಕೀನ್ಯಾ ಮುಂತಾದ ದೇಶಗಳು ಕೂಡ ಅಣೆಕಟ್ಟನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿವೆ. ಆದರೆ ನಾವೇನು ಮಾಡಲು ಹೊರಟಿದ್ದೇವೆ? ಅತ್ತ ವಾರಾಹಿ ನದಿಗೂ ಮತ್ತೊಂದು ಹೊಸ ಅಣೆಕಟ್ಟಿನ ಭೀತಿ ಎದುರಿಸುತ್ತಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಬಳಸಿಕೊಳ್ಳಲು ಕೆಳಭಾಗದಲ್ಲಿ ಗೇರುಸೊಪ್ಪ ಅಣೆಕಟ್ಟಿದೆ. ಆದರೆ ವಾರಾಹಿಗೆ ಆ ಭಾಗ್ಯವಿಲ್ಲ. ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಜಾರಿ ಮಾಡಲು ಸರ್ಕಾರ ಮುಂದಾಗಿದ್ದು, ವಾರಾಹಿ ನದಿಗೆ ಹಾಲಿ ಇರುವ ಅಣೆಕಟ್ಟನ್ನು ಹೊರತುಪಡಿಸಿ, ಕೆಳಭಾಗದಲ್ಲಿ ಮತ್ತೊಂದು ಅಣೆಕಟ್ಟು ಕಟ್ಟಬೇಕಾಗುತ್ತದೆ. ಇದರಿಂದ ಮತ್ತೆ ಅಲ್ಲಿನ ಪರಿಸರ ನಾಶವಾಗಲಿದೆ.

---

ನದಿಗೆ ಅಡ್ಡಲಾಗಿ ಕಟ್ಟಿದ ಲಿಂಗನಮಕ್ಕಿ ಅಣೆಕಟ್ಟನ್ನು ಹಂತ ಹಂತವಾಗಿ ತೆರವುಗೊಳಿಸುವುದೊಂದೇ ಮಾರ್ಗವೆಂದು ಕೆಲವರ ಅಭಿಪ್ರಾಯ ಬಂತು. ಈ ಮಾತು ಸಭೆಯಲ್ಲಿ ಭಾಗವಹಿಸಿದವರ ಕಣ್ಣು ಹುಬ್ಬು ಏರುವಂತೆ ಮಾಡಿತು. ಕೆಲವರು ಈ ರೀತಿಯ ಯೋಚನೆ ಬಹಳ ಅಸಹಜ ಹಾಗೂ ಅಭಿವೃದ್ಧಿ ವಿರೋಧಿ ಎಂದು ಅಭಿಪ್ರಾಯಪಟ್ಟರು.

ಬರೀ 132 ಕಿ.ಮೀ. ಉದ್ದವಿರುವ ಶರಾವತಿಗೆ ಒಟ್ಟು 7 ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಅದರಲ್ಲಿ ಮುಖ್ಯವಾಗಿದ್ದು, ಲಿಂಗನಮಕ್ಕಿ ಅಣೆಕಟ್ಟು. 1960ರ ದಶಕದಲ್ಲಿ ವಿದ್ಯುತ್ ಉತ್ಪಾದನೆಗಾಗಿಯೇ ನಿರ್ಮಿಸಲಾದ ಈ ಅಣೆಕಟ್ಟಿನಲ್ಲಿ ಬಹಳಷ್ಟು ಹೂಳು ತುಂಬಿಕೊಂಡಿದೆ ಎಂಬುದು ತಜ್ಞರ ಅಭಿಪ್ರಾಯ. ಜೊತೆಗೆ ಶರಾವತಿ ನದಿ ಪಾತ್ರದ ಬಹುತೇಕ ಮಳೆಕಾಡುಗಳು ಏಕಜಾತಿಯ ಅಕೇಶಿಯಾ ನೆಡುತೋಪಾಗಿ ಬದಲಾವಣೆಗೊಂಡಿದ್ದರಿಂದ, ನದಿಯ ಹರಿವೂ ಕಡಿಮೆಯಾಗಿದೆ. ಅಣೆಕಟ್ಟು ಕಟ್ಟಿ 65 ವರ್ಷಗಳಲ್ಲಿ ಅದು ತನ್ನ ಪೂರ್ಣ ಸಾಮರ್ಥ್ಯದಷ್ಟು (1819 ಅಡಿ) ತುಂಬಿದ್ದು, ಬರೀ ಹನ್ನೆರಡು ಬಾರಿ ಮಾತ್ರ. ಲಿಂಗನಮಕ್ಕಿ ಅಣೆಕಟ್ಟು ಕಟ್ಟಿದಾಗ ಮುಳುಗಿದ ಪ್ರದೇಶ ಒಟ್ಟು 1,03,985 ಎಕರೆಗಳು. ಅದರಲ್ಲಿ 58,848 ಎಕರೆ ಪ್ರದೇಶ ಅರಣ್ಯ ಪ್ರದೇಶ ಮತ್ತು 14,241 ಎಕರೆ ಜನರಿಗೆ ಸೇರಿದ ಖಾತೆ ಭೂಮಿ, 30427 ಎಕರೆ ಪ್ರದೇಶ ಕಂದಾಯ ಭೂಮಿಯಾಗಿತ್ತು. 131 ಹಳ್ಳಿಗಳು ಭಾಗಶಃ ಮುಳುಗಡೆಯಾದವು ಹಾಗೂ 44 ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾದವು ಎಂದು ಕೆಪಿಸಿಎಲ್ ದಾಖಲೆ ಹೇಳುತ್ತದೆ.

ಭೂಮಿಯ ಭವಿಷ್ಯದ ಸುರಕ್ಷತೆಯನ್ನು ನಿರ್ಧರಿಸುವ ಹೋರಾಟದಲ್ಲಿ ಗೆಲ್ಲಲು ಅಥವಾ ಸೋಲಲು ಇನ್ನು ಬರೀ ಹದಿನೆಂಟು ತಿಂಗಳು ಮಾತ್ರ ಇದೆ ಎಂದು ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಆಂಟೋನಿಯೊ ಗುಟರೆಸ್ 2024ರ ಜೂನ್ 5ರ ‘ವಿಶ್ವ ಪರಿಸರ ದಿನಾಚರಣೆ’ಯಂದು ಹೇಳಿದ್ದರು. ಅಂದರೆ, ಹವಾಗುಣ ತುರ್ತುಪರಿಸ್ಥಿತಿಯ ಕಾರಣಕ್ಕಾಗಿ ವಿನಾಶದತ್ತ ಸಾಗುತ್ತಿರುವ ಭೂಗೋಲವನ್ನು ಸಂರಕ್ಷಿಸಲು ಎಲ್ಲಾ ದೇಶಗಳು ಒಗ್ಗಟ್ಟಾಗಲು ಇಷ್ಟು ಕಡಿಮೆ ಸಮಯ ಮಾತ್ರವಿದೆ.

ವಿಶ್ವ ವನ್ಯಜೀವಿ ನಿಧಿಯ ‘ಲಿವಿಂಗ್ ಪ್ಲಾನೆಟ್’ ವರದಿ ಪ್ರಕಾರ, ಕಳೆದ 50 ವರ್ಷಗಳಲ್ಲಿ ಭೂಮಿ ತನ್ನ ಶೇ. 73ರಷ್ಟು ಜೀವಿವೈವಿಧ್ಯವನ್ನು ಕಳೆದುಕೊಂಡಿದೆ. ಇದರಲ್ಲಿ ನೆಲವಾಸಿಗಳ ಪ್ರಮಾಣ ಶೇ. 69, ಸಿಹಿನೀರಿನ ಜಲವಾಸಿಗಳ ಪ್ರಮಾಣ ಶೇ. 89 (ಬಹುಮುಖ್ಯ ಕಾರಣ ಅಣೆಕಟ್ಟುಗಳು) ಮತ್ತು ಸಾಗರವಾಸಿಗಳ ಪ್ರಮಾಣ ಶೇ. 56. ಮನುಕುಲದ ಉಳಿವು ಕೂಡ ಅವರು ಪರಿಸರದೊಂದಿಗೆ ಎಷ್ಟು ಸಾಮರಸ್ಯದಿಂದ ವರ್ತಿಸುತ್ತಾರೆಯೋ ಅದರ ಮೇಲೆ ಅವಲಂಬಿತ ಎಂಬುದು ತಜ್ಞರ ಅಭಿಪ್ರಾಯ. ಜಗತ್ತು ಈಗ ಬಹುಸ್ತರದ ಸಂಭಾವ್ಯ ದುರಂತಗಳ ಸರಮಾಲೆಯಲ್ಲಿ ಸಿಲುಕಿದೆ. ಅದರಲ್ಲಿ ಸಮಾಜದ ಅಸಮಾನತೆ, ಬಡತನ, ಆಹಾರದ ಅಭದ್ರತೆ, ಹವಾಗುಣ ತುರ್ತುಪರಿಸ್ಥಿತಿ, ವ್ಯಾಪಕ ಜೀವಿವೈವಿಧ್ಯ ನಾಶ ಇತ್ಯಾದಿಗಳಿವೆ. ಇವುಗಳು ಒಂದಕ್ಕೊಂದು ಬೆಸೆದುಕೊಂಡಿದ್ದು, ಕ್ರಮಬದ್ಧ ಪರಿಹಾರ ಹುಡುಕಬೇಕಿದೆ.

ನವಯುಗದ ಮನುಕುಲದ ವ್ಯವಸ್ಥೆ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಸೋಲುತ್ತಲೇ ಇದೆ. ಭೂಮಿಯನ್ನು ಬಗ್ಗಿಸಬಹುದು ಎಂಬ ಅಹಂಕಾರವನ್ನು ನಮಗೆ ತಂತ್ರಜ್ಞಾನ ನೀಡಿದೆ. ಪೈಪೋಟಿಯುತ ಬೆಳವಣಿಗೆ ಮತ್ತು ಲಾಭಕ್ಕಾಗಿ ನಡೆಸಲಾಗುವ ನಮ್ಮ ಪ್ರತಿ ವ್ಯವಹಾರವೂ ಇವತ್ತಿನ ಸಾಮಾಜಿಕ, ಪ್ರಾಕೃತಿಕ ಅಧಃಪತನಕ್ಕೆ ಕಾರಣವಾಗಿದೆ. ಇದೇ ಮನಸ್ಥಿತಿ ನಿಸರ್ಗವನ್ನು ದೋಚಲು ಕಾರಣವಾಗಿದ್ದು, ಮನುಕುಲ, ಇತರೆ ಜೀವಿವೈವಿಧ್ಯಗಳ ಸಂಕಷ್ಟಗಳಿಗೆ ಕಾರಣವಾಗಿದೆ.

ಅನೇಕ ಸಾಮಾಜಿಕ ಮತ್ತು ಪ್ರಾಕೃತಿಕ ಸಮಸ್ಯೆಗಳ ಪರಿಹಾರಕ್ಕೆ ಸುಸ್ಥಿರ ಮತ್ತು ಸಮಾನತೆಯ ಮಂತ್ರ ಔಷಧವಾಗಬಲ್ಲದೇ? ಕಡತ ನಿದ್ರಿತ ಸರ್ಕಾರಿ ನೀತಿ ನಿಯಮಗಳು ಕಡತದಿಂದಾಚೆ ಬಂದು ಜಾರಿಯಾಗಬೇಕು. ಅಗತ್ಯ ಬಿದ್ದಲ್ಲಿ ಸುಸ್ಥಿರ ಮತ್ತು ಸಮ ಸಮಾಜದ ಸೃಷ್ಟಿಗೆ ಅಗತ್ಯವಾದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾನೂನು ನಿಯಮಗಳು ರಚನೆಯಾಗಬೇಕು. ಇಷ್ಟೇ ಆದರೆ ಸಾಕೇ? ಇವತ್ತಿನವರೆಗೂ ಭೂಮಿಯನ್ನು ಎಷ್ಟು ಶೋಷಣೆ ಮಾಡಲಾಗಿದೆಯೋ, ಅಷ್ಟು ಪ್ರಮಾಣವನ್ನು ಮತ್ತೆ ಭೂಮಿಗೆ ಮತ್ತು ಪರಿಸರಕ್ಕೆ ವಾಪಸು ನೀಡುವ ಕೆಲಸವೂ ಆಗಬೇಕು.

ಕೊನೆಯದಾಗಿ, ಈ ಭೂಮಿ ನಮ್ಮ ಅವಶ್ಯಕತೆಗಳನ್ನು ಪೂರೈಸುವಷ್ಟು ಸಮರ್ಥವಾಗಿದೆ. ಆದರೆ ನಮ್ಮ ದುರಾಸೆಗಳನ್ನಲ್ಲ ಎಂಬುದನ್ನು ಗಾಂಧಿಯವರು ಆಗಲೇ ಹೇಳಿದ್ದರು. ಹೆಚ್ಚೂ ಕಡಿಮೆ ಇದೇ ಹೊತ್ತಿನಲ್ಲಿ ಲಿಂಗನಮಕ್ಕಿ ಅಣೆಕಟ್ಟಿನ ನಿರ್ಮಾಣಕ್ಕೆ ಕಾರಣೀಭೂತರಾದ ಸರ್. ಎಂ. ವಿಶ್ವೇಶ್ವರಯ್ಯನವರು ಕೂಡ ಒಂದು ಮಾತನ್ನು ಹೇಳಿದ್ದರು: ‘ಉತ್ಪಾದಿಸಿ ಅಥವಾ ನಾಶವಾಗಿ’. ಔದ್ಯಮಿಕ ಕ್ರಾಂತಿಯ ಹೊತ್ತಿನಲ್ಲಿ ಅವರ ಮಾತು ಸರಿಯಾಗಿಯೇ ಇತ್ತೇನೋ? ಈಗ ಆ ಮಾತು ಪ್ರಸ್ತುತವಲ್ಲ. ಹೀಗೇ ಮುಂದುವರೆದರೆ, ಉತ್ಪಾದಿಸಿ ಮತ್ತು ವಿನಾಶವಾಗಿ ಎಂದು ಮರುವ್ಯಾಖ್ಯಾನ ಮಾಡಬೇಕಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in